# ಕೃಷಿ ವಿಜ್ಞಾನ ಕೇಂದ್ರ ಹಿರೇಹಳ್ಳಿ

## -ಕಿರು ಪರಿಚಯ







ಭाकृअनुप
ICAR

ಕೃಷಿ ವಿಜ್ಞಾನ ಕೇಂದ್ರ
ಹಿರೇಹಳ್ಳಿ - ೫೭೨ ೧೬೮
ತುಮಕೂರು ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ

IIHR

## ಕೃಷಿ ವಿಜ್ಞಾನ ಕೇಂದ್ರ, ಹಿರೇಹಳ್ಳಿ

ರಾಷ್ಟ್ರೀಯ ಕೃಷಿ ಸಂಶೋಧನಾ ವ್ಯವಸ್ಥೆಯೊಳಗೆಯಲ್ಲಿ ಅಭಿವೃದ್ಧಿಪಡಿಸಿದ ತಂತ್ರ-ಜ್ಞಾನ ಹಾಗೂ ಉತ್ಪನ್ನಗಳ ಪರಿಶೀಲನೆ ಹಾಗೂ ಮೌಲ್ಯಮಾಪನಗೊಳಿಸಿ, ಪ್ರಾತ್ಯಕ್ಷಿಕೆಗಳ ಮೂಲಕ ಈ ತಂತ್ರ-ಜ್ಞಾನ / ಉತ್ಪನ್ನಗಳನ್ನು ರೈತ-ಸಮುದಾಯಕ್ಕೆ ತಲುಪಿಸುವ ಮತ್ತು ರೈತರು, ರೈತ-ಮಹಿಳೆಯರು ಹಾಗೂ ರೈತ-ಯುವಕರುಗಳಿಗೆ ತರಬೇತು ನೀಡುವ ಘನೋದ್ದೇಶದಿಂದ ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿಯು ದೇಶದಾದ್ಯಂತ ಹಲವಾರು ಕೃಷಿ ವಿಜ್ಞಾನ ಕೇಂದ್ರಗಳನ್ನು ಕೃಷಿ ಸಂಶೋಧನಾ ಸಂಸ್ಥೆಗಳಲ್ಲಿ ಅಥವಾ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಥವಾ ಸರಕಾರೇತರ ಸಂಸ್ಥೆಗಳಲ್ಲಿ ಸ್ಥಾಪಿಸಿದೆ. ಈವರೆಗೂ ಸುಮಾರು ೬೦೦ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಹಿರೇಹಳ್ಳಿಯಲ್ಲಿ ಮಾರ್ಚ್ ೨೪, ೨೦೦೮ ರಂದು ಸ್ಥಾಪಿಸಲಾದ ಈ ಕೇಂದ್ರವು ಈ ದಿಶೆಯಲ್ಲಿ ಮತ್ತೊಂದು ಮೈಲುಗಲ್ಲಾಗಿದೆ. ತುಮಕೂರು ಜಿಲ್ಲೆಯ ರೈತ-ಸಮುದಾಯಕ್ಕೆ ಕೃಷಿ, ತೋಟಗಾರಿಕೆ, ಪಶು-ಸಂಗೋಪನೆ, ಮೀನುಗಾರಿಕೆ ಹಾಗೂ ಇತರೇ ಕೃಷಿಯೇತರ ತಂತ್ರ-ಜ್ಞಾನಗಳನ್ನು ಮನಮುಟ್ಟುವಂತೆ ತಲುಪಿಸುವ ಘನೋದ್ದೇಶವನ್ನು ಈ ಕೇಂದ್ರವು ಹೊಂದಿದೆ.

## ನಮ್ಮ ಗುರಿ

ಕೃಷಿ , ತೋಟಗಾರಿಕೆ, ಪಶು-ಸಂಗೋಪನೆ, ಮೀನುಗಾರಿಕೆ ಹಾಗೂ ಇತರೇ ಕೃಷಿಯೇತರ ಕ್ಷೇತ್ರಗಳಲ್ಲಿ ಸುಸ್ಥಿರ ಮತ್ತು ಆರ್ಥಿಕವಾಗಿ ಸದೃಢವಾದ ತಂತ್ರ- ಜ್ಞಾನಗಳನ್ನು ತುಮಕೂರು ಜಿಲ್ಲೆಯ ರೈತ-ಸಮುದಾಯಕ್ಕೆ ತಲುಪಿಸುವುದು ಹಾಗೂ ಈ ತಂತ್ರ-ಜ್ಞಾನಗಳನ್ನು ಪರಿಶೀಲನೆ ಮಾಡುವುದು.

## ನಮ್ಮ ಧ್ಯೇಯ - ದೃಷ್ಟಿ

1) ಕೃಷಿ, ತೋಟಗಾರಿಕೆ, ಪಶು-ಸಂಗೋಪನೆ, ಮೀನುಗಾರಿಕೆ ಹಾಗೂ ಕೃಷಿಯೇತರ ಕ್ಷೇತ್ರಗಳಲ್ಲಿ ಅಭಿವೃದ್ಧಿಪಡಿಸಿದ ತಂತ್ರ-ಜ್ಞಾನಗಳನ್ನು ರೈತ-ಸಮುದಾಯಕ್ಕೆ ಈ ಕೆಳಕಾಣಿಸಿದ ಕಾರ್ಯಕ್ರಮಗಳ ಮೂಲಕ ತಲುಪಿಸುವುದು.

- ❖ ತುಮಕೂರು ಜಿಲ್ಲೆಯಲ್ಲಿ ಅಳವಡಿಸಿಕೊಂಡಿರುವ ಹಾಗೂ ಪ್ರಚಲಿತವಿರುವ ಕೃಷಿ ಪದ್ಧತಿಗಳನ್ನು ರೈತರ ಹೊಲ-ಗದ್ದೆಗಳಲ್ಲಿ ಪರಿಶೀಲಿಸಿ, ಅವುಗಳಲ್ಲಿ ಉತ್ತಮವೆನಿಸಿದ, ಅಧಿಕ ಲಾಭ ನೀಡುವ ತಂತ್ರ-ಜ್ಞಾನಗಳನ್ನು ರೈತ-ಸಮುದಾಯದಲ್ಲಿ ಹೆಚ್ಚಿನ ಮಟ್ಟದಲ್ಲಿ ಪಸರಿಸುವುದು.
- ❖ ರೈತರ ಹೊಲ-ಗದ್ದೆಗಳಲ್ಲಿ ಕೃಷಿ ಉತ್ಪಾದನೆ ಹಾಗೂ ಉತ್ಪಾದಕತೆಗಳನ್ನು ಹೆಚ್ಚಿಸುವ ತಂತ್ರ-ಜ್ಞಾನಗಳ ನೇರ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
- ❖ ಆಧುನಿಕ ಕೃಷಿ ತಂತ್ರ-ಜ್ಞಾನಗಳ ಬಗ್ಗೆ ರೈತ-ತರಬೇತಿ ಕಾರ್ಯಕ್ರಮಗಳ ಮೂಲಕ ರೈತರ ವಿಷಯ-ಜ್ಞಾನ ಹಾಗೂ ನೈಪುಣ್ಯತೆಗಳನ್ನು ವೃದ್ಧಿಗೊಳಿಸುವುದು.
- ❖ ಆಧುನಿಕ ಹಾಗೂ ಮುಂಚೂಣಿಯಲ್ಲಿರುವ ಕ್ಷೇತ್ರಗಳಲ್ಲಿ ಕೃಷಿ-ವಿಸ್ತರಣೆ ಹಾಗೂ ಅಭಿವೃದ್ಧಿ ಅಧಿಕಾರಿಗಳ ವಿಶೇಷ ಜ್ಞಾನ ಹಾಗೂ ನೈಪುಣ್ಯತೆಗಳನ್ನು ತರಬೇತಿ ಕಾರ್ಯಕ್ರಮಗಳ ಮೂಲಕ ಹೆಚ್ಚಿಸುವುದು.

2) ತುಮಕೂರು ಜಿಲ್ಲೆಗೆ ಕೃಷಿ ಹಾಗೂ ಇತರೇ ಕ್ಷೇತ್ರಗಳಲ್ಲಿ ಮಾಹಿತಿ ಹಾಗೂ ಜ್ಞಾನಗಳ ಭಂಡಾರವಾಗಿ ಕಾರ್ಯ ನಿರ್ವಹಿಸುವುದು.

3) ವಿಸ್ತರಣೆ ಮತ್ತು ವಿಸ್ತರಣಾ ಸಿಬ್ಬಂದಿಗಳ ಮೂಲಕ ಆಧುನಿಕ ಕೃಷಿ ತಂತ್ರ-ಜ್ಞಾನಗಳ ಬಗ್ಗೆ ಹೆಚ್ಚಿನ ಅರಿವನ್ನು ತುಮಕೂರು ಜಿಲ್ಲೆಯ ರೈತ-ಸಮುದಾಯದಲ್ಲಿ ಮೂಡಿಸುವುದು.

4) ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಹೆಚ್ಚಿನ ಇಳುವರಿ ನೀಡುವ ಸುಧಾರಿತ ತಳಿಗಳ ಹಾಗೂ ಸಂಕರ-ತಳಿಗಳ ಬೀಜೋತ್ಪಾದನೆ ಹಾಗೂ ಸಸ್ಯೋತ್ಪಾದನೆ ಮಾಡಿ ರೈತ-ಸಮುದಾಯಕ್ಕೆ ಒದಗಿಸಿಕೊಡುವುದು.

# ಕೇಂದ್ರ

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಹಿರೇಹಳ್ಳಿಯ ಕೃಷಿ ವಿಜ್ಞಾನ ಕೇಂದ್ರವು ಹಿರೇಹಳ್ಳಿ ರೈಲ್ವೇ ನಿಲ್ದಾಣದ ಹತ್ತಿರದಲ್ಲಿದ್ದು, ರಾಜ್ಯದ ರಾಜ್ಯಧಾನಿಯಾದ ಬೆಂಗಳೂರಿನಿಂದ ೫೮ ಕಿ.ಮೀ. ದೂರದಲ್ಲಿ, ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿ-೪ ರ ರಸ್ತೆಗೆ ಹೊಂದಿಕೊಂಡಿರುತ್ತದೆ. ಈ ಕೇಂದ್ರವು ೪೦ ಎಕರೆ ವಿಸ್ತೀರ್ಣ ಹೊಂದಿದ್ದು ೩೬ ಎಕರೆ ಜಮೀನು ಅನೇಕ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಂದ ಕೂಡಿದೆ. ಸುಮಾರು ೪ ಎಕರೆ ಪ್ರದೇಶದಲ್ಲಿ ಆಡಳಿತ ಕಛೇರಿ, ಪ್ರಯೋಗಾಲಯ, ತರಬೇತಿ ಕೊಠಡಿ, ಗ್ರಂಥಾಲಯ, ಕೃಷಿ ತಂತ್ರ-ಜ್ಞಾನ ಮಾಹಿತಿ ಕೇಂದ್ರ ಹಾಗೂ ಇತರೇ ವ್ಯವಸ್ಥೆಗಳನ್ನು ಒಳಗೊಂಡಿದೆ. ಇದರೊಂದಿಗೆ ತೋಟದ ಪ್ರದೇಶದಲ್ಲಿ ಹಸಿರು ಮನೆಗಳು, ನೆರಳು-ಪರದೆ ಮನೆಗಳು, ಸಸ್ಯಕ್ಷೇತ್ರ, ಬೀಜೋತ್ಪಾದನೆ-ಕ್ಷೇತ್ರ, ಗೋದಾಮು, ಸಂಗ್ರಹಾಲಯ ಹಾಗೂ ಇತರೇ ವ್ಯವಸ್ಥೆಗಳೂ ಸಹ ಇವೆ. ಈ ಕ್ಷೇತ್ರದ ಮಳೆಯ ಪ್ರಮಾಣ ಸುಮರು ಸರಾಸರಿ ೮೦೦ ಮಿ.ಮೀ.

ಈ ಕೃಷಿ ವಿಜ್ಞಾನ ಕೇಂದ್ರದ ನಿರ್ವಹಣೆಯನ್ನು ಕಾರ್ಯಕ್ರಮ ಸಂಯೋಜಕರು ನಿರ್ವಹಿಸುತ್ತಿದ್ದು, ವಿವಿಧ ಕ್ಷೇತ್ರಗಳ ವಿಷಯ-ತಜ್ಞರ ತಾಂತ್ರಿಕ ಮಾಹಿತಿ ಮತ್ತು ಸಲಹೆಗಳನ್ನು ಹಾಗೂ ಇತರೇ ಸಿಬ್ಬಂಧಿಗಳ ಬೆಂಬಲದಿಂದ ಕೇಂದ್ರದ ಎಲ್ಲಾ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಇದರೊಂದಿಗೆ ಮುಖ್ಯವಾಗಿ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರಿನ ವಿವಿಧ ವಿಭಾಗಳ ವಿಜ್ಞಾನಿಗಳೂ ಸಹ ಈ ಕೇಂದ್ರದ ಧ್ಯೇಯಗಳನ್ನು ಸಫಲಗೊಳಿಸಲು ಬೆಂಬಲ ನೀಡುವರು. ಜೊತೆಗೆ ಕ್ಷೇತ್ರೀಯ ಕಾರ್ಯಕ್ರಮ ನಿರ್ದೇಶಕರು (ಕ್ಷೇತ್ರ-೮), ಬೆಂಗಳೂರು ಹಾಗೂ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಮೇಲ್ವಿಚಾರಣೆ ಹಾಗೂ ಮಾರ್ಗ ದರ್ಶನದಡಿಯಲ್ಲಿ ಈ ಕೇಂದ್ರವು ಕಾರ್ಯನಿರ್ವಹಿಸುತ್ತಿರುವುದು.

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

(1) ಕಾರ್ಯಕ್ರಮ ಸಂಯೋಜಕರು,
ಕೃಷಿ ವಿಜ್ಞಾನ ಕೇಂದ್ರ
ಹಿರೇಹಳ್ಳಿ – 572 168,
ತುಮಕೂರು ತಾಲ್ಲೂಕು ಮತ್ತು ಜಿಲ್ಲೆ,
ಕರ್ನಾಟಕ
ದೂರವಾಣಿ : 0816–2243792, 2243214.

(2) ನಿರ್ದೇಶಕರು,
ಭಾರತೀಯ ತೋಟಗಾರಿಕೆ
ಸಂಶೋಧನಾ ಸಂಸ್ಥೆ,
ಹೆಸರಘಟ್ಟ ಕೆರೆ ಅಂಚೆ,
ಬೆಂಗಳೂರು – 560 089.
ದೂರವಾಣಿ : 080–28466353, 28466420
ಫ್ಯಾಕ್ಸ್ : 080–28466291.

ವ್ಯಾಪ್ತಿಗೆ ಒಳಪಟ್ಟ ತಾಲ್ಲೂಕುಗಳು

- ತುಮಕೂರು
- ಶಿರಾ
- ಕೊರಟಗೆರೆ
- ಮಧುಗಿರಿ
- ಪಾವಗಡ




ಪ್ರಕಾಶಕರು: ಡಾ. ಎ.ಎಸ್. ಸಿಧು, ನಿರ್ದೇಶಕರು, ಭಾ.ತೋ.ಸಂ.ಸಂ, ಬೆಂಗಳೂರು
ಲೇಖಕರು: ಶ್ರೀ ಪು.ಬ. ಗದ್ದಗಿಮಠ ಹಾಗೂ ಡಾ. ಬ.ಬಾಲಕೃಷ್ಣ
print: www.jwalamukhipress.com